ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ, ರೋಣ

ಸಿ.ಸಿ. ನಂ. 487/2019

ಸಿ.ಡಬ್ಲೂಃ 12 ಪಿ.ಡಬ್ಲೂಃ 7

ಹೆಸರುಃ ಡಾಃ ಶಾಹೀನ್ ಎಸ್ ಭಾಗವಾನ್

ವಯಸ್ಸುಃ 48 ವರ್ಷ

ಉದ್ಯೋಗಃ ಎಮ್ ಸಿ ಎಚ್ ಆಸ್ಪತ್ರೆ ತಜ್ಞ ವೈದ್ಯಾಧಿಕಾರಿಗಳು, ಖಾನಾಪುರ

ವಿಳಾಸಃ ಖಾನಾಪುರ

ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ **14/08/2025** ರಂದು ಪ್ರಮಾಣೀಕರಿಸಲಾಯಿತು.

ಮುಖ್ಯ ವಿಚಾರಣೆಃ -ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರವರಿಂದಃ

**1.** ನಾನು 2013 ರಿಂದ 2025 ರವರೆಗೆ ರೋಣ ಸರ್ಕಾರಿ ಆಸ್ಪತ್ರೆಯಲ್ಲಿ ಕರ್ತವ್ಯ ಮಾಡಿರುತ್ತೇನೆ. ದಿನಾಂಕ 20/10/2018 ರಂದು ಜಗಳ ನಡೆದಿರುವ ಸಂಬಂಧ ಅವರ ಸಂಬಂಧಿಕರ ಜೊತೆಗೆ ರೋಣ ಸರ್ಕಾರಿ ಆಸ್ಪತ್ರೆಗೆ ಬಂದಿರುತ್ತಾರೆ. ಅವರು 21/10/2018 ರಂದು ಮಧ್ಯ ರಾತ್ರಿ12-10 ಕ್ಕೆ ರೋಣ ಸರ್ಕಾರಿ ಆಸ್ಪತ್ರೆಗೆ ಬಂದಿರುತ್ತಾರೆ. ಚಾಸಾ-1 ರವರಿಗೆ ಹಣೆಯ ಬಲಭಾಗದಲ್ಲಿ 1X0.5CM ಗಾಯವಾಗಿರುವುದು ಕಂಡು ಬಂದಿರುತ್ತದೆ. ಚಾಸಾ-1 ರವರ ಎಡಗಡೆ ಮೊಣಕೈ ಹತ್ತಿರ 1X0.5CM ತೆರಚಿದ ಗಾಯವಾಗಿರುವುದು ಕಂಡು ಬಂದಿರುತ್ತದೆ. ಸದರಿ ಗಾಯಗಳು ಸಾದಾ ಸ್ವರೂಪದ ಗಾಯಗಳು ಆಗಿರುತ್ತವೆ.

2. ಅದೇ ದಿನ ಚಾಸಾ-4 ರವರು ಅವರ ಸಂಬಂಧಿಕರ ಜೊತೆಗೆ ರೋಣ ಸರ್ಕಾರಿ ಆಸ್ಪತ್ರೆಗೆ ಬಂದಿರುತ್ತಾರೆ. ಅವರು 21/10/2018 ರಂದು ಮಧ್ಯ ರಾತ್ರಿ12-20 ಕ್ಕೆ ರೋಣ ಸರ್ಕಾರಿ ಆಸ್ಪತ್ರೆಗೆ ಬಂದಿರುತ್ತಾರೆ. ಚಾಸಾ-4 ರವರಿಗೆ ಅವರ ಬಲಭಾಗದ ಬುಜದ ಹತ್ತಿರ ನೋವು ಆಗಿರುವುದು ಕಂಡು ಬಂದಿರುತ್ತದೆ. ಸದರಿ ಗಾಯವು ಸಾದಾ ಸ್ವರೂಪದ ಗಾಯ ಆಗಿರುತ್ತವೆ.

3. ಅದೇ ದಿನ ಚಾಸಾ-5 ರವರು ಅವರ ಸಂಬಂಧಿಕರ ಜೊತೆಗೆ ರೋಣ ಸರ್ಕಾರಿ ಆಸ್ಪತ್ರೆಗೆ ಬಂದಿರುತ್ತಾರೆ. ಅವರು 21/10/2018 ರಂದು ಮಧ್ಯ ರಾತ್ರಿ12-25 ಕ್ಕೆ ರೋಣ ಸರ್ಕಾರಿ ಆಸ್ಪತ್ರೆಗೆ ಬಂದಿರುತ್ತಾರೆ. ಚಾಸಾ-5 ರವರಿಗೆ ಅವರಿಗೆ ಯಾವುದೇ ಗಾಯಗಳು ಆಗಿರುವುದು ಕಂಡು ಬಂದಿರುವುದಿಲ್ಲ.

4. ಅವರು 21/10/2018 ರಂದು ಮಧ್ಯ ರಾತ್ರಿ12-15 ಕ್ಕೆ ರೋಣ ಸರ್ಕಾರಿ ಆಸ್ಪತ್ರೆಗೆ ಸಂಬಂಧಿಕರ ಜೊತೆಗೆ ಬಂದಿರುತ್ತಾರೆ. ಚಾಸಾ-6 ರವರಿಗೆ ಅವರ ಎಡಕಾಲಿನ ಮೊಣಕಾಲಿನ ಹತ್ತಿರ ಸಾದಾ ಸ್ವರೂಪದ ಗಾಯ ಆಗಿರುವುದು ಕಂಡು ಬಂದಿರುತ್ತದೆ. ಚಾಸಾ-1, 4, 5, 6 ಚಿಕಿತ್ಸೆಯನ್ನು ನೀಡಿರುತ್ತೇನೆ. ಪೊಲೀಸರ ಕೋರಿಕೆಯ ಮೇರೆಗೆ ಗಾಯದ ಪ್ರಮಾಣ ಪತ್ರಗಳನ್ನು ನೀಡಿರುತ್ತೇನೆ. ಸದರಿ ಗಾಯಗಳು ಕಟ್ಟಿಗೆ , ಕಲ್ಲಿನಿಂದ ಹಾಗೂ ಚಪ್ಪಲಿಯಿಂದ ಹೊಡೆದಾಗ ಆಗುವ ಸಾಧ್ಯತೆ ಇರುತ್ತದೆ. ಸಾಕ್ಷಿಗೆ ಗಾಯದ ಪ್ರಮಾಣ ಪತ್ರಗಳನ್ನು ನೋಡಿ ಗುರುತಿಸಿದ್ದರಿಂದ ಅವುಗಳನ್ನು ನಿಪಿ-6 ರಿಂದ 9 ಎಂದು ಗುರುತಿಸಲಾಯಿತು ಮತ್ತು ಅದರಲ್ಲಿ ಇರುವ ಸಾಕ್ಷಿಯ ಸಹಿಗಳನ್ನು ನಿಪಿ-6 ಎ ಯಿಂದ 9-ಎ ಎಂದು ಗುರುತಿಸಲಾಯಿತು.

ಪಾಟೀ ಸವಾಲು ಆರೋಪಿತರ ಪರ ವಕೀಲರು ಪಾಟೀ ಸವಾಲಿಗೆ ಸಮಯಕೇಳಿದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಒಬ್ಬ ವ್ಯಕ್ತಿಯು ಹೆಲ್ ಮೆಟ್ ಇಲ್ಲದೇ ವಾಹನವನ್ನು ಚಲಾಯಿಸಿ ರಸ್ತೆಯ ಮೇಲೆ ತಲೆ ಹಚ್ಚಿ ಬಿದ್ದಾಗ ನಿಪಿ-10 ರಲ್ಲಿ ಇರುವ ಗಾಯಗಳು ಆಗುವ ಸಂಭವ ಇರುತ್ತದೆ ಎಂದರೆ ಸರಿ.

ಮರುವಿಚಾರಣೆ ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಅದೆ.

**(ವಿಜಯಕುಮಾರ ಎನ್ )**

**ಹೆಚ್ಚುವರಿ ಸಿವಿಲ್ ಹಾಗೂ ಜೆ .ಎಮ್ .ಎಫ್.ಸಿ**

**ನ್ಯಾಯಾಧೀಶರು ರೋಣ .**